ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಸಂಸ್ಥೆಯಂದರು ಅಕ್ಕಿ ಸರಬರಾಜು ಮಾಡುವ ಕುರಿತು.

೧೪೫೩. ಶ್ರೀ ಆರ್. ವೆಂಕಟರಾವಮ್ಮ (ಮುಳಬಾಗಿಲು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಸಿರು ಕಾರ್ಡುದಾರರ ಹಾಗೂ ಕೇಸರಿ ಕಾರ್ಡುದಾರರ ಒಟ್ಟು ಸಂಖ್ಯೆ ಎಷ್ಟು?

ಆ) ಸದರಿ ಪ್ರತಿ ಕಾರ್ಡುದಾರರಿಗೆ ಪ್ರತಿ ತಿಂಗಳು ಎಷ್ಟು ಪ್ರಮಾಣದ ಅಕ್ಕಿಯನ್ನು ನೀಡಲಾಗುತ್ತಿದೆ ?

ಇ) ಹಾಗಿದ್ದಲ್ಲಿ ಇದಕ್ಕಾಗಿ ಸರ್ಕಾರದವರು ತಿಂಗಳೊಂದಕ್ಕೆ ಬಿಡುಗಡೆ ಮಾಡುವ ಅಕ್ಕಿಯ ಪ್ರಮಾಣವೆಷ್ಟು ?

ಈ) ಅವುಗಳ ಪೈಕಿ ಗ್ರಾಮಾಂತರ ಹಾಗೂ ನಗರಗಳಿಗೆ ಎಷ್ಟು ಪ್ರಮಾಣ ಅಕ್ಕಿ ಬಿಡುಗಡೆ ಮಾಡಲಾಗುವುದು ?

ಉ) ಗ್ರಾಮಾಂತರ ಪ್ರದೇಶಕ್ಕೆ ಕಡಿಮೆ ವಿತರಣೆ ಮಾಡುವುದರಿಂದ ತಾರತಮ್ಯವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಆಗಿದ್ದಲ್ಲಿ ತಾರತಮ್ಯ ಹೋಗಲಾಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧) ಹಸಿರು ಕಾರ್ಡುಗಳು ೩೧,೧೩,೬೯೩

೨) ಕೇಸರಿ ಕಾರ್ಡುಗಳು ೨೬,೭೩,೨೭೫

ಆ) ಹಸಿರು ಕಾರ್ಡಿಗೆ ಪ್ರತಿ ಕಾರ್ಡಿಗೆ ತಿಂಗಳಿಗೆ ೧೦ ಕೆ.ಜಿ. ಆಹಾರ ಮಿಶ್ರಣ (ಅಕ್ಕಿ, ರಾಗಿ, ಜೋಳ, ಗೋಧಿ) ಕೇಸರಿ ಕಾರ್ಡುಗಳಿಗೆ ದಾಸ್ತಾನು ಲಭ್ಯವಿದ್ದಲ್ಲಿ ಗ್ರಾಮಾಂತರದಲ್ಲಿ ಕಾರ್ಡ್ ಒಂದಕ್ಕೆ ೫ ಕೆ.ಜಿ. ವಿಾರದಂತೆ ನೀಡಲಾಗುತ್ತಿದೆ.

ಇ) ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಕ್ಕೆ ಒಟ್ಟು ಬಿಡುಗಡೆ ಮಾಡುತ್ತಿರುವ ಪ್ರಮಾಣ ಕೆಳಕಂಡಂತೆ ಇದೆ.—

	ತಿಂಗಳು	ಪ್ರಮಾಣ ಪ್ರತಿ ತಿಂಗಳಿಗೆ (ಮೆ. ಟನ್‌ಗಳಲ್ಲಿ)
೧	ಜನವರಿ ೧೯೮೮	೬೨,೦೦೦
೨	ಫೆಬ್ರುವರಿ ೧೯೮೮ ರಿಂದ ಮೇ ೧೯೮೮ರ ವರೆಗೆ	೫೫,೦೦೦

ಈ) ಬಿಡುಗಡೆ ಮಾಡಲಾದ ಪ್ರಮಾಣ ಕೆಳಕಂಡಂತಿದೆ.

	ತಿಂಗಳು	ಪ್ರಮಾಣ ಪ್ರತಿ ತಿಂಗಳಿಗೆ (ಮೆ. ಟನ್‌ಗಳಲ್ಲಿ)	
		ಗ್ರಾಮಾಂತರ	ಪಟ್ಟಣ
೧	ಜನವರಿ ೧೯೮೮	೨೯,೭೫೮	೩೨,೪೪೨
೨	ಫೆಬ್ರುವರಿ ೧೯೮೮ ರಿಂದ ಮೇ ೧೯೮೮ರ ವರೆಗೆ	೨೭,೦೩೨	೨೭,೮೬೮

ಉ) ಬಂದಿದೆ. ತಾರತಮ್ಯವಿದ್ದಾಗ್ಯೂ, ಗ್ರಾಮೀಣ ಪ್ರದೇಶದಲ್ಲಿ ಹಸಿರು ಕಾರ್ಡಿಗೆ ವಿತರಿಸುವ ಅಕ್ಕಿಯು ಹೆಚ್ಚಿನ ಸಹಾಯಧನಯುಕ್ತವಾದ್ದರಿಂದ, ಗ್ರಾಮೀಣ ಪ್ರದೇಶಕ್ಕೆ ಅನ್ಯಾಯ ವಾಗುತ್ತಿಲ್ಲ. ಆದ್ದರಿಂದ ಕ್ರಮ ಅಗತ್ಯವಿಲ್ಲ.

ಪ್ರಕಟಣೆ

ಅಧ್ಯಕ್ಷರು.—ದಿನಾಂಕ ೩೦-೫-೧೯೮೮ರಂದು ಸಂತಾಪ ಸೂಚನಾ ಕಲಾಪ ಇದ್ದುದರಿಂದಾಗಿ ಆ ದಿನ ಸದನದಲ್ಲಿ ಉತ್ತರಿಸುವ ೩ಳನೇ ಪ್ರಶ್ನೆ ಪಟ್ಟಿ, ಉತ್ತರ ಲಿಖಿತ ಪ್ರಶ್ನೆ, ಉತ್ತರ ಹಾಗೂ ತಡೆ ಹಿಡಿಯಲಾದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದಿಡಲಾಗಿದೆ.

೩ಳನೇ ಪಟ್ಟಿಯಂ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಕಡೂರು ತಾಲ್ಲೂಕಿನ ನೀರಾವರಿ ಸೌಲಭ್ಯ

೨೦೩೩. ಶ್ರೀ ಪಿ. ಪಿ. ಓಂಕಾರ ಮೂರ್ತಿ (ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲಾ ಕಡೂರು ತಾಲ್ಲೂಕಿನಲ್ಲಿ ಕಳೆದ ಸುಮಾರು ವರ್ಷದಿಂದ ಸರಿಯಾಗಿ ಮಳೆಬಾರದ ಪ್ರಯುಕ್ತ ಬರಗಾಲಕ್ಕೆ ತುತ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಸದರಿ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳುವರೇ.

ಇ) ಯಗಚಿ ನದಿಯಿಂದ ಕಡೂರು ತಾಲ್ಲೂಕಿಗೆ ಎಡದಂಡೆ ನಾಲ್ಕನೆಮಾಡಿದ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಅನ್ವೇಷಣೆಯಲ್ಲಿರುವ ಭದ್ರಾ ಮೇಲ್ದಂಡೆ ಯೋಜನೆಯಿಂದ ಕಡೂರು ತಾಲ್ಲೂಕಿನ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಸಲಹೆ ಪರಿಶೀಲನೆಯಲ್ಲಿದೆ.

ಇ) ಯಗಚಿ ನದಿಯಲ್ಲಿ ದೊರೆಯುವ ನೀರು ತನ್ನ ಕೊಳದ ನೀರಿನ ಅವಶ್ಯಕತೆ ಪೂರೈಸಲು ಮಾತ್ರ ಸಾಕಾಗುವುದು. ಕೃಷ್ಣ ಜಲಾನಯನ ಪ್ರದೇಶದಲ್ಲಿರುವ ಕಡೂರು ತಾಲ್ಲೂಕಿಗೆ ಯಗಚಿ ನೀರೊದಗಿಸಲು ಸಾಧ್ಯವಾಗದು.

ತುಮಕೂರು ಜಿಲ್ಲೆ ಶಿರಾ ಪ್ರಥಮ ದರ್ಜೆ ಕಾಲೇಜು ಕಟ್ಟಡದ ಬಗ್ಗೆ

೧೬೯೧. ಶ್ರೀ ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾ ಪಟ್ಟಣದಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ, ಸುಮಾರು ಮೂರು ಸಾವಿರ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು ಸದರಿ ಕಾಲೇಜಿನಲ್ಲಿ ಸ್ಥಳದ ಅಭಾವ ವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತೊಂದರೆಯನ್ನು ನಿವಾರಿಸಲು ಕಟ್ಟಡದ ನಿರ್ಮಾಣಕ್ಕಾಗಿ ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು ?